**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ್ 393 /2022**

| | | |
|---|---|---|
| **ಸಾಕ್ಷಿಯ ಹೆಸರು** : **ವೇಣುಗೋಪಾಲ್** | | ಸಿ.ಡಬ್ಲ್ಯು 20 |
| **ತಂದೆಯ ಹೆಸರು** : **ಜಗನ್ನಾಥ** | | ಪಿ.ಡಬ್ಲ್ಯು5 |
| **ವಯಸ್ಸು** : 45 **ವರ್ಷ** | | |
| **ಉದ್ಯೋಗ** : **ಮುಖ್ಯ ಪೇದೆ** | | |
| **ವಾಸ ಸ್ಥಳ** : **ತರೀಕೆರೆ** | | |

ದಿನಾಂಕ:**12-03-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

**ನಾನು** 2021 **ನೇ ಸಾಲಿನಿಂದ** ತರೀಕೆರೆಯಲ್ಲಿ ಮುಖ್ಯ ಪೊಲೀಸ್ ಪೇದೆ ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 21.09.2021 ರಂದು ನಾನು ಎಸ್.ಹೆಚ್.ಓ ಕರ್ತವ್ಯದಲ್ಲಿದ್ದಾಗ ಚಾಸ-1 ರವರು ಹಾಜರು ಪಡಿಸಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣೆಯ ಗುನ್ನೆ ನಂ.210/2021 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ದಿನಾಂಕ 22.09.2021 ರಂದು ಗುನ್ಹಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸ-2 ರವರು ತೋರಿಸಿದ ಸ್ಥಳದಲ್ಲಿ ಚಾಸ-3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 11 ಗಂಟೆಯಿಂದ 12 ರ ಮಧ್ಯದಲ್ಲಿ ಪಂಚನಾಮೆಯನ್ನು ಜರುಗಿಸಿದ್ದೇನೆ. ಪ್ರಕರಣದ ದೂರುದಾರರು ಹಾಜರುಪಡಿಸಿದ ಕೃತ್ಯಕ್ಕೆ ಸಂಬಂಧಪಟ್ಟ ಬೈಕ್ ನಂ.ಕೆ.ಎ.14 ಯು-5121 ನೇದ್ದನ್ನು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಮದ್ಯಾಹ್ನ 2 ರಿಂದ 3 ಗಂಟೆಯ ಮಧ್ಯದಲ್ಲಿ ಅಮಾನತ್ತು ಪಡಿಸಿಕೊಂಡಿದ್ದೇನೆ. ಆಗ ಚಾಸ-4 ಮತ್ತು 6 ಪಂಚರಾಗಿ ಹಾಜರು ಇದ್ದರು. ಅದೇ ದಿನ ಆರೋಪಿಯ ಹಾಜರು ಪಡಿಸಿದ ಆಂಬ್ಯುಲೆನ್ಸ್ ನಂ.ಕೆ.ಎ.16 ಜಿ 0754 ನೇದ್ದನ್ನು 3.15 ಗಂಟೆಯಿಂದ 4.00 ಗಂಟೆಯ ಮಧ್ಯದಲ್ಲಿ ಚಾಸ-7 ಮತ್ತು 8 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ವಶಕ್ಕೆ ಪಡೆದುಕೊಂಡಿದ್ದೇನೆ. ಅದೇ ದಿನ ಹೊಸದುರ್ಗ ಸರ್ಕಾರಿ ಆಸ್ಪತ್ರೆಯ ತಾಲ್ಲೂಕು ಅಧಿಕಾರಿಗಳಿಗೆ ಕಲಂ.133 ಎಂ.ವಿ ಕೆಳಗಡೆ ನೋಟೀಸನ್ನು ಕೊಟ್ಟಿದ್ದೇನೆ. ದಿನಾಂಕ 22.09.2021 ರಂದು ಪ್ರಕರಣದ ಸಾಕ್ಷಿದಾರರಾದ ಚಾಸ-2 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 23.09.2021 ರಂದು ಹೊಸದುರ್ಗ ಆಸ್ಪತ್ರೆಯಿಂದ ಚಾಸ-9 ರವರು ಕೊಟ್ಟ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ಅದೇ ದಿನ ಆರೋಪಿಗೆ ಕಲಂ.41 ರ ಅಡಿಯಲ್ಲಿ ನೋಟೀಸು ಜಾರಿ ಮಾಡಿದ್ದೇನೆ. ಅದೇ ದಿನ ಸೂಕ್ತ ದಾಖಲೆಗಳನ್ನು ಪಡೆದುಕೊಂಡು ಚಾಸ-10 ರವರಿಗೆ ಆಂಬ್ಯುಲೆನ್ಸ್ ಅನ್ನು ಮಧ್ಯಂತರ ವಶಕ್ಕೆ ಕೊಟ್ಟಿದ್ದೇನೆ. ದಿನಾಂಕ 01.12.2021 ರಂದು ಗಾಯಾಳು ಮೃತಪಟ್ಟ ಕಾರಣ ಶವ ಪಂಚನಾಮೆಯನ್ನು ಚಾಸ-19 ರವರು ಹೇಳಿದ ಹಾಗೆ ನಾನೇ ಬರೆದಿದ್ದೇನೆ. ಪ್ರ.ವ.ವರದಿಯನ್ನು ನಿಪಿ-9 ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಗಳನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ನಿಪಿ-2 ರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು, ನಿಪಿ-6 ರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಡಿ) ಎಂದು, ನಿಪಿ-3, 4 ಮತ್ತು 7 ರಲ್ಲಿ ತಾವು ಇರುವುದಾಗಿ ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಯಾವುದೇ ದೂರನ್ನು ಸ್ವೀಕರಿಸಿಕೊಂಡಿಲ್ಲ, ಗುನ್ನೆ ದಾಖಲಿಸಿಲ್ಲ, ಯಾವುದೇ ಮಹಜರ್ ಗಳನ್ನು ಮಾಡಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲ ಆಗುವಂತೆ ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ದಿನ ನ್ಯಾಯಾಲಯದ ಮುಂದೆ ಪ್ರಥಮ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.